ಅದಕ್ಕೇ ತುಂಬಾ ಯೋಚಿಸಿದ ನಂತರ, ದೊಡ್ಡ ನಗರಗಳಲ್ಲಿ ಒಬ್ಬರ ಮನೆಗೆ ಹೋಗಿ ಅವರನ್ನು ಕರೆಯಲು ಹೆಸರನ್ನು ನೆನಪಿಟ್ಟುಕೊಳ್ಳುವ ಅಗತ್ಯವಿರುವುದಿಲ್ಲ ಎಂಬುದನ್ನು ಅಶೋಕ ಮರೆತ. 'ಮಾಣಿ' ಅಥವಾ 'ಭಟ್ಟ' ಎಂಬ ಒಂದೇ ಒಂದು ಶಬ್ದ ಸಾಕು. ಇದನ್ನು ಕೇಳಿ ಬೆತ್ತಲೆ ಶರೀರಕ್ಕೆ ಲುಂಗಿ ಧರಿಸಿ ಸಾಹೇಬರು ಅಂದರೆ ಖುದ್ದು ಮಾಣಿ ಅಥವಾ ಅಡುಗೆ ಭಟ್ಟ ಬಂದು, "ಏನ್ ಸಾರ್, ಯಾರಿಗೆ ಹುಡುಕುತ್ತಿದ್ದೀರ?' ಎಂದು ಕೇಳುತ್ತಾನೆ.

ನೇಮ್‌ಪ್ಲೇಟ್ ಕಾಣಿಸುತ್ತಿದೆ, ಇಂಗ್ಲಿಷಿನಲ್ಲಿ 'ಎಮ್.ಸಿ. ಮೊಹಂತಿ' ಎಂದು ಬರೆಯಲಾಗಿದೆ. ಅಶೋಕ್ ನೆಮ್ಮದಿಯಿಂದ ಮುಗುಳ್ನಗೆಯನ್ನು ಚೆಲ್ಲುತ್ತಾ ಅದನ್ನು ನೋಡಿದ. ಆದರೆ ಹೆಸರು ನೆನಪಿಗೆ ಬರುತ್ತಿಲ್ಲ. ಗಂಟಲ ವರೆಗೆ ಬಂದು ಮರಳಿ ಹೋಗುತ್ತದೆ. ಎಮ್.ಸಿ. ಮನಶ್ಚಂದ್ರ, ಮೋಹನಚರಣ್– ಒಮ್ಮೆಲೆ ಶೂನ್ಯದಲ್ಲಿ ಬೆಳಕೊಂದು ಹೊಳೆಯಿತು, 'ಸರಿಯಿದೆ, ಸರಿಯಿದೆ–ಮಾರ್ಕಂಡಚರಣ್– ಯುರೇಕಾ. ಅಶೋಕ ಜಂಭದಿಂದ, ಗಂಭೀರ ಕಂಠದಲ್ಲಿ ತನ್ನೆಲ್ಲಾ ಧ್ವನಿಯನ್ನು ಒಗ್ಗೂಡಿಸಿ ಕರೆದ, "ಮಾರ್ಕಂಡಬಾಬೂ, ಓ ಮಾರ್ಕಂಡಬಾಬೂ! ಮಾರ್ಕಂಡಬಾಬೂ ಮನೇಲಿದ್ದಾರ?"

ಕಿಡಕಿಯಲ್ಲಿ ಮಹಿಳೆಯೊಬ್ಬರ ಮುಖ ಕಂಡಿತು, ಅವರು ಆಶ್ಚರ್ಯದಿಂದ ಹೊರಗೆ ನೋಡಿದರು. ಅವರು ಒಳಗೆ ಬಹುಶಃ ಯಾರಿಗೋ, ಏನೋ ಹೇಳುತ್ತಿದ್ದರು. ಯಾರೋ ಹೊರಗೆ ಬಂದು, ಔಪಚಾರಿಕತೆಯನ್ನು ಬಿಟ್ಟು ಹೇಳಿದರು, "ಇಲ್ಲಿ ಯಾರೂ ಮಾರ್ಕಂಡಬಾಬೂ ಫಾರ್ಕಂಡಬಾಬೂ ವಾಸಿಸುವುದಿಲ್ಲ, ಮುಂದೆ ಹೋಗಿ ಕೇಳಿ."

"ಏನು? ಇದು ಮಾರ್ಕಂಡಬಾಬೂ ಮನೆಯಲ್ಲವೇ? ನನಗೆ ಮಾರ್ಕಂಡಬಾಬೂ ಮನೆ ಗೊತ್ತಿಲ್ಲವೆಂದು ತಿಳಿದಿರ? ಒಳಗೆ ಹೋಗಿ, ಅಶೋಕ್ ಬಾಬೂ ಬಂದಿದ್ದಾರೆಂದು ಹೇಳಿ."

"ಯಾರು ಮಾಕಂಡಬಾಬು, ಸಾಹೇಬರೇ? ನಿಮಗೆಲ್ಲೋ ತಪ್ಪು ತಿಳಿವಳಿಕೆಯಾಗಿದೆ. ಅವರು ಇಲ್ಲಿಲ್ಲ ಅಂತ ಹೇಳಲಿಲ್ಲವೇ? ಹೋಗಿ, ಮುಂದೆ ಕೇಳಿ." ಆ ವ್ಯಕ್ತಿ ಮತ್ತೆ ಮಾತನಾಡದೆ, ರಸ್ತೆಯಲ್ಲಿ ಹೋಗುತ್ತಿದ್ದ ಮೀನು ಮಾರುವವನಿಗೆ ಗಟ್ಟಿಯಾಗಿ ಹೇಳಿದ, "ಬಾರಪ್ಪ, ಇಲ್ಲಿ ಬಾ!" ಆ ವ್ಯಕ್ತಿಯ ಈ ಚೇಷ್ಟೆಯಿಂದ ಅಶೋಕ್ ಬಾಬೂ ರೇಗಿದ. ಅಶೋಕ ನಗರದಲ್ಲಿ ಬೆಳದವನು, ನಗರದವರ ಲುಚ್ಚತನ ಅವನಿಗೆ ತಿಳಿದಿದೆ. ಈಗ ಅವನು ಸೈಕಲನ್ನು ಬೆನ್ನಿಗೆ ಒರಗಿಸಿ, ಎದೆಯನ್ನು ಅಗಲಿಸಿ ಎದುರು ನೋಡುತ್ತಾ ಹೇಳಿದ–

"ಏಯ್!"

"ಏನು?"

"ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕಿದೆ."

"ಏನು ಮಾತಾಡಬೇಕು?"

"ಹೂಂ, ನೀನ್ಯಾರು ಅಂತ ಸ್ವಲ್ಪ ಹೇಳು?"

"ನಾನು ಈ ಮನೆಯ ನೌಕರ."

"ಹೂಂ, ಎಷ್ಟು ಸಂಬಳ ತಗೋತೀಯ?"

"ನಾನೆಷ್ಟಾದರೂ ಸಂಬಳ ತಗೋಳ್ತೀನಿ, ಅದಕ್ಕೂ ನಿಮಗೂ ಏನು ಸಂಬಂಧ?"

"ಸಂಬಂಧ ಇದೆ! ಮೂರ್ಖ ನೌಕರನನ್ನು ಕೆಲಸಕ್ಕಿಟ್ಟುಕೊಂಡರೆ ಮನೆಯ ಮಾಲೀಕ ಹಾಳಾಗುತ್ತಾನೆ; ಅವನ ಸರ್ವನಾಶವಾಗುತ್ತದೆ. ಅಗ್ಗದ ನೌಕರನನ್ನು ಕೆಲಸಕ್ಕಿಟ್ಟುಕೊಂಡರೆ ಕಡೆಗೆ ತುಂಬಾ ನಷ್ಟ

